Office of the Principal Director,
Karnataka state Audit and Accounts Department,
TTMC Building, 'A' Block,
3rd Floor, BMTC, Shanthinagara,
Bengaluru.560 027.
Phone No:. 080. 22215273
Fax No.:. 080. 22216500
E.mail: 1. controllerstateaccounts@yahoo.com
2. controllerksaad@gmail.com

ಪ್ರಧಾನ ನಿರ್ದೇಶಕರ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿ.ಟಿ.ಎಂ.ಸಿ ಕಟ್ಟಡ, 'ಎ' ಬ್ಲಾಕ್,
3ನೇ ಮಹಡಿ, ಬಿ.ಎಂ.ಟಿ.ಸಿ, ಶಾಂತಿನಗರ,
ಬೆಂಗಳೂರು.560 027.
ದೂರವಾಣಿ ಸಂಖ್ಯೆ:. 080. 22215273
ಫ್ಯಾಕ್ಸ್ ಸಂಖ್ಯೆ:. 080. 22216500
ಇ.ಮೇಲ್: 1.controllerstateaccounts@yahoo.com
2. controllerksaad@gmail.com

ಸಂಖ್ಯೆ: ರಾಲೆಪ 05 ಸಿವಿಇ 2022–23 /1247. ದಿನಾಂಕ:16.07.2022.

## ಸುತ್ತೋಲೆ

ವಿಷಯ: ಭಿಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರೊಂದಿಗೆ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಪತ್ರ ಸಂಖ್ಯೆ: ಮರನಿ/ಮರ/ ಭಿಕ್ಷಾಟನೆ –34/2022–23 ದಿ:13.07.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, ರಾಜ್ಯದಲ್ಲಿ ಚಿಕ್ಕ ಕಂದಮ್ಮಗಳನ್ನು ಭಿಕ್ಷಾಟನೆಗೆ ಬಳಸುತ್ತಿರುವುದು ಹಾಗೂ ಮಕ್ಕಳನ್ನು ದಿನದ ಬಾಡಿಗೆ ಮೇರೆಗೆ ಭಿಕ್ಷಾಟನೆಯಲ್ಲಿ ತೊಡಗಿಸುತ್ತಿರುವುದು, ಹಸುಗೂಸಿಗೆ ನಿದ್ರೆ ಮಾತ್ರೆ ಅಥವಾ ಚುಚ್ಚುಮದ್ದು ನೀಡಿ ಮಲಗಿಸಿ ಭೀಕ್ಷಾಟನೆಗೆ ದೂಡುತ್ತಿರುವುದಲ್ಲದೆ ಭಿಕ್ಷಾಟನೆಯನ್ನು ವೃತ್ತಿಯನ್ನಾಗಿಸಿಕೊಂಡಿರುವ ಈ ಪಿಡುಗನ್ನು ಸಮಾಜದಿಂದ ತಡೆಗಟ್ಟಲು/ ನಿಷೇದಿಸಲು ಹಾಗೂ ಭಿಕ್ಷಾಟನೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಕ್ರಮ ವಹಿಸುವಂತೆ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರು ತಿಳಿಸಿರುವ ಹಿನ್ನೆಲೆಯಲ್ಲಿ,

"ಸಾರ್ವಜನಿಕ ಪ್ರದೇಶಗಳಾದ ದೇವಸ್ಥಾನ, ಸಿನಿಮಾ ಪ್ರದೇಶ, ಮಾರುಕಟ್ಟೆ, ರೈಲ್ವೆ ನಿಲ್ದಾಣ ಹಾಗೂ ಇತರೆ ಸಾರ್ವಜನಿಕ ಪ್ರದೇಶಗಳಲ್ಲಿ ಭಿಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರು ಕಂಡುಬಂದಲ್ಲಿ ಮಾಹಿತಿಯನ್ನು ಒದಗಿಸುವುದು ಎಲ್ಲಾ ಇಲಾಖೆಯ ಹಾಗೂ ಪ್ರತಿಯೊಬ್ಬ ನಾಗರೀಕರ ಕರ್ತವ್ಯವಾಗಿದ್ದು, ಭೀಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರು ಕಂಡುಬಂದಲ್ಲಿ ಮಾಹಿತಿಯನ್ನು ಮಕ್ಕಳ ಸಹಾಯವಾಣಿ ಸಂಖ್ಯೆ 1098 ಕ್ಕೆ ಕರೆ ಮಾಡುವ ಮೂಲಕ ರಕ್ಷಿಸಲು ಸಹಕಾರ ನೀಡುವಂತೆ ಈ ಇಲಾಖೆಯ ಎಲ್ಲಾ ಅಧಿಕಾರಿ/ ನೌಕರರಿಗೆ ಈ ಮೂಲಕ ಸೂಚಿಸಲಾಗಿದೆ.

29/07/22

ಅಡಕ: ಉಲ್ಲೇಖಿತ ಪತ್ರದ ಪ್ರತಿ.

ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

ಇವರಿಗೆ,

1. ಅಪರ ನಿರ್ದೇಶಕರು, ಪ್ರಾಂತೀಯ ಕಚೇರಿ, ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ ಇವರಿಗೆ ಕ್ರಮಕ್ಕಾಗಿ ಹಾಗೂ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗಳ ಗಮನಕ್ಕೆ ತರಲು ಸೂಚಿಸಿದೆ.
2. ಜಂಟಿ ನಿರ್ದೇಶಕರು/ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಬೆಂಗಳೂರು/ತುಮಕೂರು/ಶಿವಮೊಗ್ಗ/ಚಿಕ್ಕಬಳ್ಳಾಪುರ/ರಾಮನಗರ/ದಾವಣಗೆರೆ/ಚಿತ್ರದುರ್ಗ/ಕೋಲಾರ/ ಮೈಸೂರು/ಮಡಿಕೇರಿ/ಮಂಡ್ಯ/ಹಾಸನ/ಚಾಮರಾಜನಗರ/ಮಂಗಳೂರು/ಉಡುಪಿ/ಚಿಕ್ಕಮಗಳೂರು/ಬೆಳಗಾವಿ/ ಧಾರವಾಡ/ವಿಜಯಪುರ/ಬಾಗಲಕೋಟೆ/ಹಾವೇರಿ/ಗದಗ/ಕಾರವಾರ/ಹಾವೇರಿ/ಕಲಬುರಗಿ/ಬೀದರ್/ಯಾದಗಿರಿ/ ರಾಯಚೂರು/ಕೊಪ್ಪಳ/ಬಳ್ಳಾರಿ ಇವರಿಗೆ ಕ್ರಮಕ್ಕಾಗಿ ಕಳುಹಿಸಿದೆ.
3. ಲೆಕ್ಕಪರಿಶೋಧನಾಧಿಕಾರಿಗಳು, ತರಬೇತಿ ಶಾಖೆ – ಅಂತರ್ಜಾಲದಲ್ಲಿ ಪ್ರಕಟಿಸಲು ಕಳುಹಿಸಿದೆ.
4. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ॥ ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರಿಗೆ ಕಳುಹಿಸಿದೆ.
5. ಕಚೇರಿ ಪ್ರತಿ.

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ 3 ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001.

Ph.No.080-22879381/8

E-mail ID: icps.kar@gmail.com

ಪತ್ರ ಸಂಖ್ಯೆ:ಮರನಿ/ಮರ/ಭಿಕ್ಷಾಟನೆ-34/2022-23 ದಿನಾಂಕ:13.07.2022

ಎಲ್ಲಾ ಇಲಾಖೆಯ ಮುಖ್ಯಸ್ಥರುಗಳಿಗೆ,

ಮಾನ್ಯರೇ,

ವಿಷಯ:- ಭಿಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರೊಂದಿಗೆ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯ ವಾಣಿ ಸಂಖ್ಯೆ 1098ಗೆ ಮಾಹಿತಿ ನೀಡುವ ಕುರಿತು.

ಉಲ್ಲೇಖ:- 1. ದಿ:17.06.2022ರಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆ

2. ದಿನಾಂಕ:21.06.2022ರಂದು ನಿರ್ದೇಶಕರು ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರ ಅಧ್ಯಕ್ಷತೆಯಲ್ಲಿ ವರ್ಚುಯಲ್ ಮೂಲಕ ನಡೆದ ಸಭೆಯ ನಡವಳಿಗಳು.

ಪ್ರಧಾನ ನಿರ್ದೇಶಕರ ಕಛೇರಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು

14 JUL 2022

14/07

ಪ್ರಧಾನ ನಿರ್ದೇಶಕರು

****

ರಾಜ್ಯದಲ್ಲಿ ಚಿಕ್ಕ ಕಂದಮ್ಮಗಳನ್ನು ಭಿಕ್ಷಾಟನೆಗೆ ಬಳಸುತ್ತಿರುವುದು ಹಾಗೂ ಮಕ್ಕಳನ್ನು ದಿನದ ಬಾಡಿಗೆ ಮೇರೆಗೆ ಭಿಕ್ಷಾಟನೆಯಲ್ಲಿ ತೊಡಗಿಸುತ್ತಿರುವುದು. ಹಸುಗೂಸಿಗೆ ನಿದ್ರೆ ಮಾತ್ರೆ ಅಥವಾ ಚುಚ್ಚುಮದ್ದು ನೀಡಿ ಮಲಗಿಸಿ ಭಿಕ್ಷಾಟನೆಗೆ ದೂಡುತ್ತಿರುವುದಲ್ಲದೆ ಭಿಕ್ಷಾಟನೆಯನ್ನು ವೃತ್ತಿಯನ್ನಾಗಿಸಿಕೊಂಡಿರುತ್ತಾರೆ. ಈ ಪಿಡುಗನ್ನು ಸಮಾಜದಿಂದ ತಡೆಗಟ್ಟಲು/ನಿಷೇಧಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿವಿಧ ಇಲಾಖೆಯ ಸಹಯೋಗ ಮತ್ತು ಸಮನ್ವಯದೊಂದಿಗೆ ದಿ: 17.06.2022ರಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಪ್ರಾರಂಭಿಕವಾಗಿ ನಗರದಲ್ಲಿ ಭಿಕ್ಷಾಟನೆಯನ್ನು ತಡೆಗಟ್ಟಲು ಸಂಬಂಧಪಟ್ಟ ಇಲಾಖೆಗಳು ಆಂತರಿಕವಾಗಿ ಸಭೆ ನಡೆಸಿ. ರೂಪುರೇಷಗಳನ್ನು ಸಿದ್ಧಪಡಿಸುವಂತೆ ತಿಳಿಸಿರುತ್ತಾರೆ.

ಅದರಂತೆ, ಉಲ್ಲೇಖ (2)ರಂತೆ, ದಿ:21.06.2022ರಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದಲ್ಲಿ ಸಭೆಯನ್ನು ಆಯೋಜಿಸಲಾಗಿದ್ದು, ಕೆಳಗಿನಂತೆ ಕ್ರಮವಹಿಸುವ ಬಗ್ಗೆ ನಿರ್ಧರಿಸಲಾಗಿದೆ.

**"ಭಿಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರು ಕಂಡುಬಂದಲ್ಲಿ ಮಾಹಿತಿಯನ್ನು ಒದಗಿಸುವುದು ಎಲ್ಲಾ ಇಲಾಖೆಯ ಹಾಗೂ ಪ್ರತಿಯೊಬ್ಬ ನಾಗರೀಕರ ಕರ್ತವ್ಯವಾಗಿದ್ದು, ಭಿಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರು ಕಂಡುಬಂದಲ್ಲಿ ಮಾಹಿತಿಯನ್ನು ಮಕ್ಕಳ ಸಹಾಯವಾಣಿ ಸಂಖ್ಯೆ 1098 ಗೆ ಕರೆ ಮಾಡುವ ಮೂಲಕ ರಕ್ಷಿಸಲು ಸೂಚಿಸಲಾಗಿದೆ".**

ಆದ್ದರಿಂದ, ತಮ್ಮ ಇಲಾಖೆಯ ಅಧೀನದ ಅಧಿಕಾರಿ / ಸಿಬ್ಬಂದಿಗಳಿಗೆ, ಸಾರ್ವಜನಿಕ ಪ್ರದೇಶಗಳಾದ ದೇವಸ್ಥಾನ, ಸಿನಿಮಾ ಪ್ರದೇಶ, ಮಾರುಕಟ್ಟೆ, ರೈಲ್ವೆ ನಿಲ್ದಾಣ ಹಾಗೂ ಇತರೆ ಸಾರ್ವಜನಿಕ ಪ್ರದೇಶಗಳಲ್ಲಿ ಭಿಕ್ಷೆ ಬೇಡುವ ಮಕ್ಕಳು, ಮಹಿಳೆಯರು ಹಾಗೂ ಮಹಿಳೆಯರೊಂದಿಗೆ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡಲು ಸೂಕ್ತ ನಿರ್ದೇಶನ ನೀಡಲು ಕೋರಿದೆ ಹಾಗೂ ಈ ಸಂಬಂಧ ಕೈಗೊಂಡ ಕ್ರಮದ ಮಾಹಿತಿಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಸಲ್ಲಿಸಲೂ ಸಹಾ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ,

1. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಸಲ್ಲಿಸುತ್ತಾ, ಸದರಿ ಮಾಹಿತಿಯನ್ನು ಮಾನ್ಯ ಸಚಿವರ ಆದ್ಯ ಗಮನಕ್ಕೆ ಸಲ್ಲಿಸಲು ಕೋರಿದೆ.
2. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ ಸಲ್ಲಿಸುತ್ತಾ, ಸದರಿ ಮಾಹಿತಿಯನ್ನು ಸರ್ಕಾರದ ಕಾರ್ಯದರ್ಶಿಯವರ ಆದ್ಯಗಮನಕ್ಕೆ ಸಲ್ಲಿಸಲು ಕೋರಿದೆ.

ಪ್ರತಿಯನ್ನು ಅಗತ್ಯಕ್ರಮಕ್ಕಾಗಿ,

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
2. ಕಾರ್ಯದರ್ಶಿಗಳು, ಕೇಂದ್ರ ಪರಿಹಾರ ಸಮಿತಿ, ಸಮಾಜ ಕಲ್ಯಾಣ ಇಲಾಖೆ, ಮಾಗಡಿ ರಸ್ತೆ, ಬೆಂಗಳೂರು.
2. ಕಛೇರಿ ಪ್ರತಿ